## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಸ್ವಸಹಾಯ ಸಂಘಗಳಿಗೆ ಪ್ರೇರಣಾ ಯೋಜನೆ ಅಡಿ ಆರ್ಥಿಕ ಚಟುವಟಿಕೆಗಳಿಗಾಗಿ ಮೈಕ್ರೋಕ್ರೆಡಿಟ್ ಯೋಜನೆಯನ್ನು ಸಂಬಂಧಿಸಿದ ನಿಗಮಗಳಿಂದ ಜಾರಿಗೊಳಿಸುವ ಬಗ್ಗೆ.

**ಓದಲಾಗಿದೆ:** ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ಏಕಕಡತ ಸಂಖ್ಯೆ:ಅಂಅನಿ/ಕೈ ಕಿತ/ ಕಿಸಾಪ-69/2018-19 ದಿನಾಂಕ:21-08-2018

*****

**ಪ್ರಸ್ತಾವನೆ:-**

ಮೇಲೆ ಓದಲಾದ ಏಕಕಡತ ಪ್ರಸ್ತಾವನೆಯಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ ಲೆಕ್ಕಶೀರ್ಷಿಕೆ 2225-01-190-2-09/4225-01-190-0-03 ಇದರಡಿಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರಿಗೆ ತಲಾ ರೂ10,000/- ಸಹಾಯಧನ ಮತ್ತು ರೂ.5,000/- ನೇರಸಾಲ ಒಟ್ಟು ರೂ.15,000/-ಗಳನ್ನು ಅತಿ ಸಣ್ಣ ವ್ಯಾಪಾರ ವಹಿವಾಟು ಮಾಡಲು ನೀಡಲಾಗುತ್ತಿದೆ. ಅಲ್ಲದೇ ಮೈಕ್ರೋಫೈನಾನ್ಸ್-1 ಯೋಜನೆ ಲೆಕ್ಕಶೀರ್ಷಿಕೆ 2225-01-190-2-01 ಅಡಿಯಲ್ಲಿ ಸಣ್ಣ ಮತ್ತು ಅತಿಸಣ್ಣ ವ್ಯಾಪಾರದ ಘಟಕವನ್ನು ಸ್ಥಾಪಿಸಲು ರೂ10,000/- ಸಹಾಯಧನ ಮತ್ತು ರೂ.15,000/- ನೇರಸಾಲ ಸೇರಿದಂತೆ ಒಟ್ಟು ರೂ.25,000/-ಗಳನ್ನು ನೀಡಲಾಗುತ್ತಿದೆ. ಮಹಿಳಾ ಸಮೃದ್ಧಿ ಯೋಜನೆ ಲೆಕ್ಕಶೀರ್ಷಿಕೆ 2225-01-190-2-01 ಇದರಡಿ ಸಣ್ಣ ಮತ್ತು ಅತಿ ಸಣ್ಣ ವ್ಯಾಪಾರದ ಘಟಕವನ್ನು ಸ್ಥಾಪಿಸಲು ರೂ.15,000/- ಸಹಾಯಧನ ಮತ್ತು ರೂ.10,000/- ನೇರಸಾಲವನ್ನು ನೀಡಲಾಗುತ್ತಿದೆ.

ಮೇಲ್ಕಂಡ ಸಹಾಯಧನ ಮತ್ತು ಸಾಲವನ್ನು ಫಲಾನುಭವಿಗಳ ಖಾತೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಸದರಿ ಯೋಜನೆಗಳನ್ನು ಉತ್ತಮಗೊಳಿಸಲು ಮಹಿಳಾ ಸ್ವಸಹಾಯ ಸಂಘದ ಮೂಲಕ ಆದಾಯ ಗಳಿಸುವ ಉತ್ಪಾದನಾ/ಸೇವಾ ಘಟಕಗಳನ್ನು ಆರಂಭಿಸಲು ಮೈಕ್ರೋಕ್ರೆಡಿಟ್ ಯೋಜನೆಯನ್ನು ಪರಿಷ್ಕರಣೆ ಮಾಡಲು ಕೋರಿರುತ್ತಾರೆ.

ಪ್ರತಿ ಮಹಿಳಾ ಸದಸ್ಯರಿಗೆ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲ ಸೇರಿದಂತೆ ಒಟ್ಟು ರೂ:25,000/-ಗಳಂತೆ ಒಟ್ಟಾರೆ ರೂ.2.50 ಲಕ್ಷಗಳನ್ನು ಉತ್ಪಾದನಾ/ಸೇವಾ ಸ್ವಸಹಾಯ ಗುಂಪುಗಳಿಗೆ ಕನಿಷ್ಠ 10 ಮಹಿಳಾ ಸದಸ್ಯರಿರುವ ಸ್ವಸಹಾಯ ಸಂಘಗಳಿಗೆ ನೀಡಲು ಸರ್ಕಾರದ ಆದೇಶ ಹೊರಡಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಸರ್ಕಾರದ ಆದೇಶ ಹೊರಡಿಸಲು ನಿರ್ಧರಿಸಲಾಗಿದೆ.

### ಸರ್ಕಾರದ ಆದೇಶ ಸಂಖ್ಯೆ: ಸಕಇ 301 ಎಸ್‌ಡಿಸಿ 2018, ಬೆಂಗಳೂರು, ದಿನಾಂಕ:21.02.2019.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಸ್ವಸಹಾಯ ಗುಂಪುಗಳಿಗೆ 'ಪ್ರೇರಣಾ ಯೋಜನೆ – ಮೈಕ್ರೋಕ್ರೆಡಿಟ್' ಎಂಬ ಹೆಸರಿನಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಒಟ್ಟು ಸದಸ್ಯರಿಗೆ ರೂ.15,000/- ಸಹಾಯಧನ ಮತ್ತು ರೂ.10,000/- ನೇರಸಾಲ ಸೇರಿದಂತೆ ಒಟ್ಟು ರೂ.25,000/-ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

**ಷರತ್ತುಗಳು:**

1) ಈಗ ಜಾರಿಯಲ್ಲಿರುವ ಅ) ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ, ಆ) ಮೈಕ್ರೋಫೈನಾನ್ಸ್-1 ಯೋಜನೆ ಮತ್ತು ಇ) ಮಹಿಳಾ ಸಮೃದ್ಧಿ ಯೋಜನೆಗಳನ್ನು 'ಪ್ರೇರಣಾ ಯೋಜನೆ – ಮೈಕ್ರೋಕ್ರೆಡಿಟ್'ನಲ್ಲಿ ವಿಲೀನಗೊಳಿಸಿದೆ.

2) ಕನಿಷ್ಠ 10 ಮಹಿಳೆಯರು ಸ್ವಸಹಾಯ ಗುಂಪಿನಲ್ಲಿ ಸದಸ್ಯರಿರತಕ್ಕದ್ದು. ಈ ಪೈಕಿ ಕನಿಷ್ಠ ಶೇ.80 ರಷ್ಟು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು. ಸದರಿ ಸ್ವಸಹಾಯ ಸಂಘ ನೊಂದಣಿಯಾದ ಸಂಘ ಆಗಿರಬೇಕು. ಸಂಘದ ಸದಸ್ಯರು ಬಿ.ಪಿ.ಎಲ್./ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಹೊಂದಿರಬೇಕು.

3) ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.

4) ಸಂಘದ ಸದಸ್ಯರು ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು ಹಾಗೂ 18 ವರ್ಷಕ್ಕೆ ಮೇಲ್ಪಟ್ಟಿರಬೇಕು.

CamScanner

5) ಒಬ್ಬ ಸದಸ್ಯರಿಗೆ ಒಟ್ಟು ರೂ.25,000/- ರಂತೆ (ರೂ.15,000/- ಸಹಾಯಧನ ಮತ್ತು ರೂ.10,000/- ಸಾಲ) ಒಟ್ಟು 10 ಸದಸ್ಯರಿಗೆ ಒಟ್ಟು ರೂ.2.50 ಲಕ್ಷ ನೀಡುವುದು. ಒಂದು ವೇಳೆ ಸಂಘದಲ್ಲಿ 10ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ, ಸದರಿ ಸಂಖ್ಯೆಗನುಗುಣವಾಗಿ ಸಾಲ-ಸಹಾಯಧನ ನೀಡುವುದು.

6) ಸದರಿ ಸ್ವಸಹಾಯ ಸಂಘ ಆದಾಯ ಬರುವ ಆರ್ಥಿಕ (ಚಟುವಟಿಕೆಗಳಾದ) ಉತ್ಪಾದನಾ/ಸೇವಾ ಘಟಕಗಳನ್ನು ಕೈಗೊಳ್ಳತಕ್ಕದ್ದು.

7) ಸದರಿ ಸಂಘ ಹಣಕಾಸಿನ ವಹಿವಾಟು ಮತ್ತು ಸಾಲ-ಸಹಾಯಧನವನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ವಿವರಗಳೊಂದಿಗೆ ಸಲ್ಲಿಸತಕ್ಕದ್ದು.

8) ನಿಗಮಗಳಿಂದ ಸಹಾಯಧನ ಮತ್ತು ಸಾಲವನ್ನು ನೇರವಾಗಿ ಘಟಕದ ಚಟುವಟಿಕೆಗಳ ಆಧಾರದ ಮೇಲೆ 2 ಕಂತುಗಳಲ್ಲಿ ಸಂಘದ ಬ್ಯಾಂಕ್ ಖಾತೆಗೆ ನೀಡುವುದು.

9) ಸದರಿ ಸಂಘದವರು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಆಯ್ಕೆ ಮಾಡಿಕೊಂಡು ಅವರ ಜಂಟಿ ಸಹಿಯೊಂದಿಗೆ ಅನುದಾನವನ್ನು ಬಳಸಿಕೊಳ್ಳುವುದು. ಆದರೆ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಕಡ್ಡಾಯವಾಗಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.

10) ಪ್ರೇರಣಾ ಯೋಜನೆಯನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಲ್ಲೂ ಅವರ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ ಈ ಸೌಕರ್ಯಗಳನ್ನು ಒದಗಿಸುವುದು.

11) ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಜಾತಿಗಳು ಸಂಬಂಧಿಸಿದ ಆಯಾ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

12) ಸ್ವಸಹಾಯ ಸಂಘದವರು ನಿಗಮಗಳಿಂದ ನೀಡಿದ ಸಾಲವನ್ನು ವಾರ್ಷಿಕವಾಗಿ ಶೇ.4ರ ಬಡ್ಡಿದರದಲ್ಲಿ ಸಾಲ ಮತ್ತು ಬಡ್ಡಿಯನ್ನು 3 ವರ್ಷಗಳಲ್ಲಿ ಮಾಸಿಕ/ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಸಮಾಜ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿ ಹಂಚಿಕೆಯಾಗಿರುವ ಲೆಕ್ಕಶೀರ್ಷಿಕೆ 2225-01-190-2-09/4225-01-190-0-03 ಮತ್ತು 2225-02-190-2-07/4225-02-190-1-02 ರಡಿ ಭರಿಸತಕ್ಕದ್ದು.

ಮೈಕ್ರೋಕ್ರೆಡಿಟ್ ಯೋಜನೆ:- ಮಹಿಳಾ ಸ್ವಸಹಾಯ ಯೋಜನೆಗೆ ಸಹಾಯಧನ ರೂ.15,000/- ಮತ್ತು ಸಾಲ ರೂ.10,000/- ನೀಡಲು 2018-19ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆ ದಿನಾಂಕ:28-09-2018ರಲ್ಲಿ ಅನುಮೋದನೆಗೊಂಡಿರುತ್ತದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 05 ಟಿಎಫ್‌ಪಿ 2018, ದಿನಾಂಕ: 05-04-2018ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು (ಎ & ಇ ಲೆಕ್ಕ ಪರಿಶೋಧನೆ-1, 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.



CS CamScanner

5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಬೆಂಗಳೂರು.
7. ವಿಶೇಷಾಧಿಕಾರಿ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಬೆಂಗಳೂರು.
10. ಜಂಟಿ ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು

<u>ಪ್ರತಿಗಳು:-</u>

1. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 ಮತ್ತು 9) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

CS CamScanner